"ಮಧುರ ಮಕ್ಕಳೇ - ಪದವಿಯ ಆಧಾರವು ವಿದ್ಯೆಯ ಮೇಲಿದೆ, ಓದಬೇಕು ನಂತರ ಓದಿಸಬೇಕಾಗಿದೆ ಗಲ್ಲಿ-ಗಲ್ಲಿಯಲ್ಲಿ ಹೋಗಿ ತಂದೆಯ ಪರಿಚಯ ಕೊಡಬೇಕಾಗಿದೆ"

ಪ್ರಶ್ನೆ: ತಾವು ಮಕ್ಕಳು ಯಾವ ಇಚ್ಛೆಯಿಂದ ದೂರವಿದ್ದು ಸೇವೆಯಲ್ಲಿ ತೊಡಗಬೇಕಾಗಿದೆ?

ಉತ್ತರ: ನೀವು ದಯಾಹೃದಯಿ ಮಕ್ಕಳಾಗಿದ್ದೀರಿ, ಆದ್ದರಿಂದ ನಿಮಗೆ ಯಾರಿಂದಲೂ ಹಣವನ್ನು ಪಡೆಯುವ ಇಚ್ಛೆ ಇರಬಾರದು. ಈ ಇಚ್ಛೆಯಿಂದ ದೂರವಿದ್ದು ದಾನ ಮಾಡುವ ಸೇವೆಯಲ್ಲಿ, ಅನ್ಯರನ್ನು ತನ್ನ ಸಮಾನ ಮಾಡಿಕೊಳ್ಳುವ ಸೇವೆಯಲ್ಲಿ ತೊಡಗಿರಬೇಕಾಗಿದೆ. ಬುದ್ಧಿಯಲ್ಲಿರಲಿ -ಯಾರ ಅದೃಷ್ಟದಲ್ಲಿ ಇರುವುದೋ ಅವರು ಬೀಜವನ್ನು ಅವಶ್ಯವಾಗಿ ಬಿತ್ತುತ್ತಾರೆ. ಒಂದುವೇಳೆ ಯಾರಾದರೂ ವಾಚ ಅಥವಾ ಕರ್ಮಣಾ ಸೇವೆಯನ್ನು ಮಾಡಲಾಗದಿದ್ದರೆ ಧನದಿಂದಲೂ ಸಹಯೋಗಿ ಆಗುತ್ತಾರೆ. ಬಡ ಮಕ್ಕಳಂತೂ ಹಿಡಿ ಅವಲಕ್ಕಿಯನ್ನು ಕೊಟ್ಟು ಮಹಲನ್ನು ಪಡೆದುಕೊಳ್ಳುತ್ತಾರೆ.

ಗೀತೆ: ಪ್ರಿಯತಮನೇ ಬಂದು ಮಿಲನ ಮಾಡು.......................

ಓಂ ಶಾಂತಿ. ಪ್ರಿಯತಮೆಯರಿಗಾಗಿ ಒಂದೇ ಕರೆ ಸಾಕಾಗಿದೆ. ಹೀಗೆ ಯಾರು ಕರೆದರು ಮತ್ತು ಯಾರನ್ನು ಕರೆದರು? ಇದು ಕೇವಲ ನೀವು ಮಕ್ಕಳಿಗೆ ಗೊತ್ತಿದೆ ಏಕೆಂದರೆ ನೀವು ತಂದೆಯ ಮುಖಾಂತರ ನೀವು ತಂದೆಯನ್ನು ಯಥಾರ್ಥವಾಗಿ ಅರಿತುಕೊಂಡಿದ್ದೀರಿ ತಂದೆಯು ಮಗನನ್ನು ಪ್ರತ್ಯಕ್ಷ ಮಾಡುತ್ತಾರೆ ನಂತರ ಮಕ್ಕಳು ತಂದೆಯನ್ನು ಪ್ರತ್ಯಕ್ಷಮಾಡುತ್ತಾರೆ ಈರೀತಿ ನಿಯಮವಿದೆ. ಈಗ ಪ್ರಿಯತಮೆಯರೆಲ್ಲರು ಪ್ರಿಯತಮನನ್ನು ಕರೆಯುತ್ತಾರೆ ಗೀತೆಯನ್ನು ಕೃಷ್ಣನಿಗಾಗಿ ಗಾಯನ ಮಾಡಲಾಗಿದೆ. ಎಲ್ಲರಿಗೂ ಕೃಷ್ಣನ ಜೊತೆ ಪ್ರೀತಿಯಂತು ಇದ್ದೇ ಇದೆ. ಕೃಷ್ಣನು ರಾಜಯೋಗವನ್ನು ಕಲಿಸಿದ್ದರು ಎಂದು ಕೃಷ್ಣನ ಭಕ್ತರು ತಿಳಿಯುತ್ತಾರೆ ಆದರೆ ವಾಸ್ತವದಲ್ಲಿ ಎಲ್ಲರ ಪ್ರಿಯತಮನು ಒಬ್ಬರೇ ಆಗಿದ್ದಾರೆ. ಎಲ್ಲಾ ಪತಿತರನ್ನು ಪಾವನ ಮಾಡವವರು ಒಬ್ಬರೇ ಆಗಿದ್ದಾರೆ. ನಿರಾಕಾರನನ್ನು ನೆನಪು ಮಾಡುತ್ತಾರೆ ಆದರೆ ಆ ಪರಮಪಿತ ಪರಮಾತ್ಮನನ್ನು ಯಥಾರ್ಥ ರೀತಿಯಲ್ಲಿ ಅರಿತುಕೊಂಡಿಲ್ಲ. ನಿರಾಕಾರ ಶಬ್ದದ ಅರ್ಥವೇನೆಂದು ಗೊತ್ತಿಲ್ಲ. ತಂದೆಯು ತಿಳಿಸಿದ್ದಾರೆ ಒಬ್ಬನೇ ರಾಮನಾಗಿದ್ದಾರೆ, ಅವರೊಬ್ಬನನ್ನೇ ಹೇ! ಪ್ರಭು, ಹೇ! ಈಶ್ವರ, ಓ ಗಾಡ್.. ಎಂದು ಕರೆಯುತ್ತಾರೆ. ಯಾವುದೇ ಶಾರೀರಿಕ ಮನುಷ್ಯ ಅಥವಾ ದೇವತೆಗಳನ್ನು ಕರೆಯುವುದಿಲ್ಲ. ಬುದ್ಧಿ ನಿರಾಕಾರನ ಕಡೆ ಹೊರಟು ಹೋಗುತ್ತದೆ. ಪರಮಾತ್ಮ ಎಲ್ಲರಿಗೂ ಒಬ್ಬರೇ ಆಗಿದ್ದಾರೆ. ನಾವು ಸಹೋದರರಾಗಿದ್ದೇವೆ, ಆದರೆ ಆತ್ಮಗಳ ರೂಪದಲ್ಲಿದ್ದೇವೆ. ಹಾಗೇ ನೋಡಿದರೆ ಪ್ರತಿಯೊಬ್ಬರು ತಮ್ಮ-ತಮ್ಮ ಧರ್ಮದವರಾಗಿದ್ದಾರೆ. ತಮ್ಮ ಧರ್ಮದ ಸಹೋದರ-ಸಹೋರರಿಯರು ಸಹ ಹೊಡೆದಾಡುತ್ತಿರುತ್ತಾರೆ. ಯಾವಾಗ ಎಲ್ಲರು ದುಃಖಿಯಾಗುತ್ತಾರೆಯೋ ಆಗ ನನ್ನನ್ನು ನೆನಪು ಮಾಡಿ ಎಂದು ತಂದೆಯು ತಿಳಿಸುತ್ತಾರೆ ಏಕೆಂದರೆ ಸರ್ವರ ಪತಿತಪಾವನನು ನಾನೇ ಆಗಿದ್ದೇನೆ. ಎಲ್ಲಾ ಪ್ರಿಯತಮೆಯರಿಗೂ ಪ್ರಿಯತಮನು ಒಬ್ಬರೇ ಆಗಿದ್ದಾರೆ. ಪ್ರಿಯತಮೆಯು ಪ್ರಿಯತಮನನ್ನು ನೆನಪು ಮಾಡುತ್ತಾರೆ. ಪ್ರಿಯತಮನೇ ಬಂದು ಮಿಲನ ಮಾಡಿ ಎಂದು ಪ್ರಿಯತಮೆಯರಲ್ಲರೂ ನೆನಪು ಮಾಡುತ್ತಾರೆ. ಆತ್ಮ ನೆನಪು ಮಾಡುತ್ತಿದೆ ಮನಸ್ಸಿನಿಂದ ಕರೆಯುತ್ತಿದೆ ಕರೆಯುವುದಂತೂ ಆತ್ಮವಾಗಿದೆಯಲ್ಲವೇ, ಶರೀರವಂತೂ ಅಲ್ಲ, ಜೀವಾತ್ಮವು ಜೀವಾತ್ಮಗಳೊಂದಿಗೆ ಮಾತನಾಡುತ್ತದೆ. ಪ್ರಪಂಚದಲ್ಲಿ ಮನುಷ್ಯರಂತೂ ದೇಹಾಭಿಮಾನಿಗಳಾಗಿರುವ ಕಾರಣ ತಮ್ಮನ್ನು ಶರೀರವೆಂದು ತಿಳಿಯುತ್ತಾರೆ. ಜೀವಾತ್ಮನೇ ಕರೆಯುತ್ತದೆ ಎಂಬುದನ್ನು ನೀವು ಮಕ್ಕಳು ಪಕ್ಕಾ-ಪಕ್ಕಾ ತಿಳಿದುಕೊಳ್ಳಬೇಕು. ಆತ್ಮ ಪ್ರೀತಿ ಮಾಡುತ್ತದೆ ಶರೀರವು ಶರೀರದೊಂದಿಗೆ ಪ್ರೀತಿ ಮಾಡುವುದಿಲ್ಲ ಆತ್ಮವು ಶರೀರವನ್ನು ಧಾರಣೆ ಮಾಡುತ್ತದೆ. ಈ ಸಮಯದ ಪ್ರೀತಿಯು ಸಹ ಆಶುದ್ಧವಾಗಿದೆ. ದೇವಿ-ದೇವತೆಗಳ ಪ್ರೀತಿಯಂತೂ ಬಹಳ ಶುದ್ಧವಾಗಿರುವುದಲ್ಲವೆ. ಪ್ರೀತಿ ವಿಕಾರದ್ದೆಂದು ಮನುಷ್ಯರು ತಿಳಿಯುತ್ತಾರೆ ಆದರೆ ಸತ್ಯಯುಗದಲ್ಲಿ ಪ್ರೀತಿಯಿರುತ್ತದೆ ಆದರೆ ಅಲ್ಲಿ ಯಾವುದೇ ವಿಕಾರವಿರುವುದಿಲ್ಲ. ತಂದೆಯು ನೀವು ಮಕ್ಕಳನ್ನು 21 ಜನ್ಮಗಳಿಗೆ ಈ ವಿಕಾರದಿಂದ ಬಿಡಿಸುತ್ತಾರೆ. ನೀವು ಈ ಮಾತುಗಳನ್ನು ಯಾರಿಗಾದರೂ ತಿಳಿಸಿದರೆ ಕೇಳಿ ಅವರು ಬಹಳ ಖುಷಿ ಪಡುತ್ತಾರೆ. ಬಾಬಾ ಸೇವೆ ನಡೆಯುವುದಿಲ್ಲವೆಂದು ನೀವು ಹೇಳುತ್ತಿರಿ ಆದರೆ ಸೇವೆಯ ಅನೇಕ ವಿಧಾನಗಳನ್ನು ತಿಳಿಸುತ್ತಾರೆ. ಈಗ ದಸರಾ ಹಬ್ಬವು ಬರುತ್ತದೆ. ಎಲ್ಲಾ ಜಾಗಗಳಲ್ಲಿ ದೇವಿಯರ ಪೂಜೆ ನಡೆಯುತ್ತದೆ ಆದ್ದರಿಂದ ಅಲ್ಲಿ ಹೋಗಿ ತಿಳಿಸಬೇಕು ತಂದೆಯ ಪರಿಚಯ ಕೊಡಬೇಕು. ಅವರು ಪರಮಪಿತ ಪರಮಾತ್ಮ ನಿರಾಕಾರ ತಂದೆಯಾಗಿದ್ದಾರೆ. ನಾವು ಆತ್ಮಗಳು ಸಹ ಮೂಲವತನದಲ್ಲಿ ಇರುತ್ತೇವೆ. ವತನವೆಂದು ಮನೆಗೂ ಹೇಳಲಾಗುತ್ತದೆ. ನಾವಾತ್ಮಗಳ ತಂದೆಯೂ ಸಹ ಆ ಪರಮಧಾಮದಲ್ಲೇ ಇರುತ್ತಾರೆ. ತಂದೆಯೂ ಮಕ್ಕಳನ್ನೂ ಕಳುಹಿಸುತ್ತಾರೆ. ಇದೂ ಸಹ ಡ್ರಾಮಾನುಸಾರ ತಾನಾಗಿಯೇ ನಡೆಯುತ್ತಿರುತ್ತದೆ. ತಂದೆಯೂ ಸಹ ತನ್ನ ಸಮಯದಲ್ಲಿ ಬರಬೇಕಾಗುತ್ತದೆ. ಒಬ್ಬರೇ ತಂದೆಯಾಗಿದ್ದಾರೆ, ಉಳಿದವರೆಲ್ಲರೂ ಆತ್ಮಗಳಾಗಿವೆ. ಇದು ಮನುಷ್ಯ ಸೃಷ್ಟಿಯಾಗಿದೆ. ಸತ್ಯ ಯುಗದಲ್ಲಿ ದೈವೀ ಗುಣವುಳ್ಳ ಲಕ್ಷ್ಮೀನಾರಾಯಣರಿದ್ದರು. ಬಾಕಿ ಯಾವುದೇ 8-10 ಭುಜಗಳುಳ್ಳ ಮನುಷ್ಯರು ಇರುವುದಿಲ್ಲ ಅಂದಮೇಲೆ ಇವರು ಎಲ್ಲಿಂದ ಬಂದರು? ಎಲ್ಲಿ ಪೂಜೆಯು ನಡೆಯುತ್ತದೋ ಅಲ್ಲಿ

ಹೋಗಿ ನೀವು ಮುಗ್ಧರಾಗಿ ಕೇಳಬೇಕು-ಏನು ಮಾಡುತ್ತಿದ್ದೀರಿ, ಇದೇನು? ಅನೇಕ ರುದ್ರ ಯಜ್ಞಗಳನ್ನು ರಚಿಸುತ್ತಾರೆ. ಸಾಹುಕಾರರು ಯಜ್ಞ ಮುಂತಾದವುಗಳನ್ನು ಬಹಳ ಮಾಡಿಸುತ್ತಿರುತ್ತಾರೆ. ನೀವು ಎಲ್ಲಿ ಬೇಕಾದರೂ ಹೋಗಿ ತಿಳಿಸಬಲ್ಲಿರಿ ಏಕೆಂದರೆ ನೀವು ರಮತಾ ಯೋಗಿಗಳಾಗಿದ್ದೀರಿ. ಯಾರು ಯಾವ- ಯಾವ ದೇಶದಲ್ಲಿದ್ದೀರೊ ಅವರು ಅಲ್ಲಿ ಸರ್ವೀಸ್ ಮಾಡಬಹುದು. ಇವರು ಯಾರು, ಇವರ ಪೂಜೆಯು ಏಕೆ ಆಗುತ್ತದೆ? ಇವರು ಏನು ಮಾಡಿ ಹೋಗಿದ್ದಾರೆ? ಯಾರ ಸಂತಾನರಾಗಿದ್ದಾರೆ?- ಹೀಗೆ ಕುಳಿತು ಕೇಳಬೇಕು ನಂತರ ತಿಳಿಸಬೇಕು ಏಕೆಂದರೆ ನೀವು ಎಲ್ಲರ ಕಲ್ಯಾಣ ಮಾಡಬೇಕು, ದಯಾಹೃದಯಿಗಳಾಗಬೇಕು. ಮನುಷ್ಯರಂತೂ ಹಣವನ್ನು ಸುಮ್ಮನೇ ವ್ಯರ್ಥವಾಗಿ ಕಳೆಯುತ್ತಿರುತ್ತಾರೆ.

ಮಕ್ಕಳಿಗಾಗಿ ಸರ್ವೀಸಂತೂ ಬಹಳವಿದೆ. ಈಗ ದಸರ ಹಬ್ಬವು ಬರುತ್ತಿದೆ ಅಂದಮೇಲೆ ಹಬ್ಬದ ಬಗ್ಗೆ ತಿಳಿಸಬೇಕು- ರಾವಣನನ್ನು ಏಕೆ ಸುಡುತ್ತಾರೆ? ರಾವನ ರಾಜ್ಯವು ಎಲ್ಲಿಂದ ಎಲ್ಲಿಯವರೆಗೆ ನಡೆಯಿತು? ನಂತರ ವಿಷ್ಣುವಿನ ರಾಜ್ಯವು ಎಲ್ಲಿಂದ ಎಲ್ಲಿಯವರೆಗೆ ನಡೆಯಿತು? ನಂತರ ವಿಷ್ಣುವಿನ ರಾಜ್ಯವು ಎಷ್ಟು ಸಮಯ ನಡೆಯಿತು? ಇದು ಬ್ರಹ್ಮಾರವರ ದಿನ, ಅದು ಬ್ರಹ್ಮಾರವರ ರಾತ್ರಿಯಾಗಿದೆ. ಹೀಗೆ ಸರ್ಕಾರದವರಿಗೂ ಸಹ ಹೋಗಿ ತಿಳಿಸಬೇಕು. ಅವಶ್ಯಕವಾಗಿ ಇದು ರಾವಣ ರಾಜ್ಯವಾಗಿದೆಯಲ್ಲವೇ. ಅದು ವಿಷ್ಣುವಿನ ಸಂಪ್ರದಾಯ ಅಥವಾ ದೈವೀ ಸಂಪ್ರದಾಯವಾಗಿದೆ, ಇದು ಅಸುರೀ ಸಂಪ್ರದಾಯವಾಗಿದೆಯಲ್ಲವೇ. ದೊಡ್ಡ- ದೊಡ್ಡ ವ್ಯಕ್ತಿಗಳಿಗೆ ಚಿತ್ರಗಳನ್ನು ತೆಗೆದುಕೊಂಡು ಹೋಗಿ ತಿಳಿಸಬೇಕು. ಈರೀತಿ ಪ್ರಯತ್ನ ಪಡಬೇಕು ಇಂತಹ ಬಾಣ ಹೊಡೆಯಬೇಕು ಅದರಿಂದ ಹೆಸರು ಪ್ರಸಿದ್ಧವಾಗಿಬಿಡಬೇಕು. ಬನಾರಸ್ನಲ್ಲಿ ಸರಸ್ವತೀ ಮುಂತಾದ ಬಹಳ ದೊಡ್ಡ- ದೊಡ್ಡ ಬಿರುದುಗಳು ಸಿಗುತ್ತವೆ. ಈಗ ಸರಸ್ವತಿಯಂತೂ ಈ ಜಗದಂಬೆಯಾಗಿದ್ದಾರೆ. ಭಾರತವಾಸಿಗಳೆಲ್ಲರೂ ಜಗದಂಬೆಯನ್ನು ಒಪ್ಪುತ್ತಾರೆ, ಜಗತ್ತನ್ನು ರಚಿಸುವವರು ಇವರಾಗಿದ್ದಾರೆ. ಅಂದಮೇಲೆ ಅವಶ್ಯವಾಗಿ ಜಗತ್ತಿನ ಪಿತನೂ ಇರಬೇಕು. ಜಗತ್ಪಿತ ಬ್ರಹ್ಮಾ ಮತ್ತು ಜಗದಾಂಬ ಸರಸ್ವತಿ ಎಂದು ಹೇಳುತ್ತಾರಲ್ಲವೇ, ಸರಸ್ವತಿಯೂ ಸಹ ಬ್ರಹ್ಮಾರವರ ಮಗಳು, ಬ್ರಹ್ಮನ ಮುಖವಂಶಾವಳಿಯಾಗಿದ್ದಾರೆ. ಅಂದಮೇಲೆ ಬ್ರಹ್ಮನನ್ನು ರಚಿಸುವವರು ಯಾರು? ಶಿವ ಪರಮಾತ್ಮಾಯ ನಮಃ ಎಂದು ಗಾಯನ ಮಾಡುತ್ತಾರೆ. ಉಳಿದೆಲ್ಲರೂ ದೇವತಾಯ ನಮಃ ಎಂದು ಗಾಯನ ಮಾಡಲ್ಪಡುತ್ತಾರೆ ಅಂದಮೇಲೆ ದೇವತೆಗಳ ರಚಯಿತ ಶಿವಪರಮಾತ್ಮನಾದರು. ಅವರಿಂದಲೇ ದೇವತೆಗಳಿಗೆ ಆಸ್ತಿಯು ಸಿಕ್ಕಿರಬೇಕು ಆದುದರಿಂದ ನೀವು ಮಕ್ಕಳು ತಿಳಿಸಲು ಹೊರಡಬೇಕು. ಯಾರು ಒಳ್ಳೆಯ ಬುದ್ಧಿವಂತರಾಗಿದ್ದೀರಿ ಅವರು ಸರ್ವೀಸ್ ಮಾಡಬೇಕು. ತಂದೆಯಂತೂ ಗಲ್ಲಿ- ಗಲ್ಲಿಗೂ ಹೋಗುವುದಿಲ್ಲ. ಇದು ಮಕ್ಕಳ ಕೆಲಸವಾಗಿದೆ. ಸರ್ವಿಸ್ ಮಾಡದಿದ್ದರೆ ಇವರು ಸೇವಾಯೋಗ್ಯರಲ್ಲವೆಂದು ತಂದೆಯು ತಿಳಿಯುತ್ತಾರೆ. ಅಂದಾಗ ಅಂತಹ ಪದವಿಯನ್ನೇ ಪಡೆಯುತ್ತಾರೆ. ಭಲೆ ಮಕ್ಕಳಂತೂ ಆಗಿದ್ದೀರಿ ಆದರೆ ಎಲ್ಲವು ವಿದ್ಯೆಯ ಮೇಲೆ ಆಧಾರಿತವಾಗಿದೆ ಯಾರು ಹೆಚ್ಚಿಗೆ ಓದುತ್ತಾರೆಯೋ ಅವರು ಶ್ರೇಷ್ಠ ಪದವಿಯನ್ನು ಪಡೆಯುತ್ತಾರೆ ಇದನ್ನು ಶಿವತಂದೆಯು ಸಮ್ಮುಖದಲ್ಲಿ ತಿಳಿಸುತ್ತಿದ್ದಾರೆ- ಶಿವ ತಂದೆಯು ಮಧುಬನದಲ್ಲಿ ಮುರುಳಿಯನ್ನು ನುಡಿಸುತ್ತಿರುತ್ತಾರೆಂದು ಹೊರಗಿನ ಮಕ್ಕಳು ತಿಳಿಯುತ್ತಾರೆ. ಮುರುಳಿಯು ತಲುಪದಿದ್ದರೆ ಮಕ್ಕಳು ಬೇಸರವಾಗಿಬಿಡುತ್ತಾರೆ, ಶಿವಬಾಬಾರವರ ಮುರುಳಿಯು ಏಕೆ ಬರಲಿಲ್ಲವೆಂದು ಯೋಚಿಸುತ್ತಾರೆ. ಏಕೆಂದರೆ ಶಿವತಂದೆಯ ಮುರುಳಿಯಿಂದಲೇ ನಮ್ಮ ಜೀವನವು ವಜ್ರಸಮಾನವಾಗಬೇಕಾಗಿದೆ. ಮುರುಳಿಯನ್ನಂತೂ ಪ್ರತಿನಿತ್ಯವೂ ಕೇಳಬೇಕು. 7 ದಿನಗಳ ಮರುಳಿಯೂ ಸಹ ಒಂದು ವೇಳೆ ಯಾರ ಬಳಿಯಾದರು ಹೋದರೆ ಅವರು ಅದನ್ನು ಕುಳಿತು ಓದಿದರೆ ಎಷ್ಟೊಂದು ಖುಷಿಯು ಸಿಗುತ್ತದೆ ಅಂದಮೇಲೆ ಅವಶ್ಯಕವಾಗಿ ಓದಬೇಕು. ಯಾವುದೇ ಹೆಳವ-ಕುಂಟ, ಮೂಕರೂ ಸಹ ಇದನ್ನು ಓದಬಹುದು. ಎಂತಹದ್ದೇ ಜ್ವರದಲ್ಲಿ, ಕಾಯಿಲೆಯ ಸಮಯದಲ್ಲಿ ಅವಶ್ಯಕವಾಗಿ ಮುರುಳಿಯನ್ನು ಓದಬೇಕು.

ನೀವು ಕೇವಲ ತಿಳಿಸಿ- ನಿಮಗೆ ಇಬ್ಬರು ತಂದೆಯರಿದ್ದಾರೆ ಯಾರು ಆಸ್ತಿಯನ್ನು ತೆಗೆದುಕೊಳ್ಳುವವರಿರುವರೋ ಅವರು ತಕ್ಷಣ ಈ ಎರಡೇ ಶಬ್ದಗಳಿಂದಲೇ ಅರಿತುಕೊಳ್ಳುತ್ತಾರೆ. ಈಜ್ಞಾನವೇ ಇಂತಹ ಸಹಜವಾಗಿದೆ. ತಂದೆಯನ್ನು ನೆನಪು ಮಾಡುವುದರಿಂದ ಇಡೀ ಚಕ್ರವು ಬುದ್ಧಿಯಲ್ಲಿ ಬಂದುಬಿಡುತ್ತದೆ. ಎಷ್ಟು ಬುದ್ಧಿಯಲ್ಲಿ ಚಕ್ರವನ್ನು ತಿರುಗಿಸುತ್ತೀರೂ ಅಷ್ಟು ಚಕ್ರವರ್ತಿಗಳಾಗುತ್ತೀರಿ, ತಂದೆಯು ತಿಳಿಸುತ್ತಾರೆ ಯಾರು ನನ್ನ ಭಕ್ತರಿದ್ದಾರೆ ಅಥವಾ ಲಕ್ಷ್ಮೀ- ನಾರಾಯಣರನ್ನು ಒಪ್ಪುವವರಿದ್ದಾರೆಯೋ ಅವರಿಗೆ ತಿಳಿಸಿ ತಾವೇ ದೇವಿ ದೇವತೆಗಳಾಗಿದ್ದಿರಿ, 84 ಜನ್ಮಗಳ ಚಕ್ರವನ್ನು ಸುತ್ತಿರಿ. ಈಗ ಪುನಃ ದೇವತೆಗಳಾಗಿ ಈ ಬಾಬಾರವರೂ ಸಹ ಲಕ್ಷ್ಮೀ- ನಾರಾಯಣರವರ ಭಕ್ತರಾಗಿದ್ದಾರಲ್ಲವೆ. ಪೂಜಾರಿಯಿಂದ ಪುನಃ ಪೂಜ್ಯರಾಗುತ್ತಾರೆ, ಲಕ್ಷ್ಮೀ-ನಾರಾಯಣರು ಪೂಜ್ಯರಾಗಿದ್ದಾರಲ್ಲವೆ. ಲಕ್ಷ್ಮೀ-ನಾರಾಯಣರ ಮಂದಿರದಲ್ಲಿ ಹೋಗುತ್ತೀರಿ, ನಿನ್ನೆ ಇವರ ಪೂಜೆ ಮಾಡುತ್ತಿದ್ದೆವು, ಇಂದು ನಾವು ಅವರಂತೆ ಆಗುತ್ತಿದ್ದೇವೆ ಎಂದು ಹೇಳುತ್ತೀರಿ. ತಿಳಿಸುವುದು ಬಹಳ ಸಹಜವಾಗಿದೆ. ನೀವು ಮಕ್ಕಳು ದಯಾಹೃದಯಿಗಳಾಗಬೇಕು, ಯಾರಿಗೆ ಸರ್ವಿಸಿನ ಆಸಕ್ತಿಯಿರುವುದೋ ಅವರು ಕಲಿಸುವಂತಹ ಬ್ರಾಹ್ಮಣಿಯ ಜೊತೆಯಿರುತ್ತಾರೆ, ನಮಗೆ ತಿಳಿಸಿಕೊಡಿ ಎಂದು ಕೇಳುತ್ತಾರೆ. ನೀವು ಶಿವಬಾಬಾನ ಭಂಡಾರದಿಂದ ಸೇವಿಸುತ್ತೀರಿ ಅಂದಮೇಲೆ ಶಿವಬಾಬಾನ ಸೇವೆ ಮಾಡಬೇಕಲ್ಲವೇ ? ಎಲ್ಲರೂ ಶಿವಬಾಬಾನ ಭಂಡಾರದಲ್ಲಿ ಹಾಕುತ್ತಾರೆ. ತಿಳಿಯುತ್ತಾರೆ ನಾವು ಶಿವಬಾಬಾ ರವರ ಭಂಡಾರದಿಂದ ತಿನ್ನುತ್ತೇವೆ ಎಂದು. ಅಂದಮೇಲೆ ಮನಸಾ- ವಾಚಾ- ಕರ್ಮಣಾ ಸೇವೆ ಮಾಡಬೇಕು. ಇಲ್ಲಿ ನಿಮಗೆ ಎಷ್ಟು ಖುಷಿಯಾಗುತ್ತದೆ! ಆ ಖುಷಿಯು ಮನೆಯಲ್ಲಿಬರುವುದಿಲ್ಲ. ಮನಸಾ ಸೇವೆಯನ್ನೂ ಮಾಡಬೇಕು, ನೆನಪು ಮಾಡಬೇಕಾಗಿದೆ. ಪವಿತ್ರರಾಗಬೇಕು, ಶಂಖ

ಧ್ವನಿಯನ್ನೂ ಮಾಡಬೇಕಾಗಿದೆ. ಕರ್ಮಣಾ ಯಾವುದೇ ಯಜ್ಞಸೇವೆಯನ್ನು ಮಾಡಬೇಕು. ಪ್ರಾರಂಭದಲ್ಲಿ ಮಮ್ಮಾ-ಬಾಬಾರವರೂ ಸಹ ಪಾತ್ರೆ ತೊಳೆಯುತ್ತಿದ್ದರು. ಸಗಣಿಯ ಬೆರಣಿಯನ್ನು ತಟ್ಟುತ್ತಿದ್ದರು. ದೇಹಾಭಿಮಾನವನ್ನು ಬಿಡುವುದಕ್ಕೋಸ್ಕರ ಎಲ್ಲವನ್ನು ಮಾಡುತ್ತಿದ್ದರು. ಈಗಂತೂ ಅನೇಕರಲ್ಲಿ ದಿನ ಪ್ರತಿದಿನ ದೇಹಾಭಿಮಾನವು ಹೆಚ್ಚಾಗುತ್ತಾ ಹೋಗುತ್ತದೆ. ಯಜ್ಞದಿಂದ ತಿನ್ನುತ್ತಾರೆಂದರೆ ಸೇವೆಯನ್ನೂ ಸಹ ಮಾಡಬೇಕು. ತಂದೆಯನ್ನು ನೆನಪು ಮಾಡುವುದರಿಂದ ವಿಕರ್ಮಗಳು ವಿನಾಶವಾಗುತ್ತವೆ, ಸರ್ವವ್ಯಾಪಿ ಎಂದು ಹೇಳಿದರೆ ವಿಕರ್ಮ ವಿನಾಶವು ಹೇಗಾಗುತ್ತದೆ? ಸರ್ವವ್ಯಾಪಿ ಎಂದು ಹೇಳುವುದರಿಂದ ಬುದ್ಧಿಯೋಗವು ಜೋಡಣೆಯಾಗುವುದಿಲ್ಲ ಆದ್ದರಿಂದ ಈ ಸೇವೆಯನ್ನು ಎಲ್ಲರೂ ಮಾಡಬೇಕು. ದಾನ ಮಾಡಬೇಕಾಗಿದೆ. ಆ ಸೇವೆಯಿಲ್ಲದಿದ್ದರೆ ಸ್ಥೂಲಸೇವೆ ಮಾಡಿ. ಅದನ್ನೂ ಮಾಡಲಾಗದಿದ್ದರೆ ಧನಸೇವೆ ಮಾಡಿ ಅದು ಸಹ ಸೇವೆಯಾಗಿಬಿಡುವುದು. ಬೀಜವನ್ನು ಬಿತ್ತುತ್ತೀರೆಂದರೆ ಅದರ ಫಲವು ಬರುತ್ತದೆ. ಇಲ್ಲಿ ಹಿಡಿ ಅವಲಕ್ಕಿಯನ್ನು ಕೊಟ್ಟರೆ ಅಲ್ಲಿ ಮಹಲ್ ಸಿಕ್ಕಿಬಿಡುತ್ತದೆ. ಬೀಜವನ್ನು ಬಿತ್ತಿ ಎಂದು ಯಾರಿಗೂ ಹೇಳಬೇಕಾಗಿಲ್ಲ. ಅದೃಷ್ಟದಲ್ಲಿಲ್ಲದಿದ್ದರೆ ಎಂದೂ ಬರುವುದಿಲ್ಲ. ಸಾಹುಕಾರರು 5 ಲಕ್ಷದ ವಿಮೆಯನ್ನು ಮಾಡಿಸುತ್ತಾರೆಂದರೆ ಬಡವರು 500 ರೂಗಳ ವಿಮೆ ಮಾಡಿಸುತ್ತಾರೆ. ಇಲ್ಲಂತೂ ಎಲ್ಲರಿಗಿಂತ ಹೆಚ್ಚಿಗೆ ವಿಮೆ ಮಾಡಿಸುತ್ತಾರೆ. ಬಡವರ ಒಂದು ಹಿಡಿ ಅವಲಕ್ಕಿಯೂ ಸಹ ಸಾಹುಕಾರರ ಹಣಕ್ಕೆ ಸರಿಸಾಟಿಯಾಗಿಬಿಡುತ್ತದೆ. ನೋಡಿ ಮಮ್ಮಾರವರು ಏನುವಿಮೆ ಮಾಡಿದರು? ತನು- ಮನದಿಂದ ಎಷ್ಟು ಸೇವೆ ಮಾಡಿದರು. ಬಹಳ ಧನಸೇವೆ ಮಾಡುವವರಿಗೂ ಸಹ ಸಿಗುವುದಿಲ್ಲ ಅಷ್ಟು ಮಮ್ಮಾರವರಿಗೆ ಸಿಗುತ್ತದೆ.

ತಾವು ನರನಿಂದ ನಾರಾಯಣರಾಗುವವರಿದ್ದೀರಿ. ಇದು ಸ್ವರಾಜ್ಯ ಯೋಗದ ಜ್ಞಾನವಾಗಿದೆ. ಪ್ರತಿಯೊಬ್ಬರೂ ಸಹ ತಿಳಿದುಕೊಳ್ಳಬಹುದು- ನಾವು ಮಮ್ಮಾ- ಬಾಬಾರವರನ್ನು ಅನುಕರಣೆ ಮಾಡುತ್ತೇವೆಯೋ? ಪುರುಷಾರ್ಥ ಮಾಡಬೇಕಲ್ಲವೆ. ಈ ಜ್ಞಾನಸಾಗರನಂತೂ ಗಲ್ಲಿ- ಗಲ್ಲಿಯಲ್ಲಿಯೂ ಹೋಗುವುದಿಲ್ಲ ಅಥವಾ ಹೊರಗಡೆ ಹೋಗಿ ಭಾಷಣ ಮಾಡುವುದಿಲ್ಲ. ಅವರಂತೂ ತಿಳಿಸುತ್ತಾರೆ- ಮಕ್ಕಳೇ, ನಾನಂತೂ ನೀವು ಮಕ್ಕಳ ಸಮ್ಮುಖದಲ್ಲಿ ಕುಳಿತು ಭಾಷಣ ಮಾಡುತ್ತೇನೆ, ನಾನು ಎಲ್ಲರ ತಂದೆಯಾಗಿದ್ದೇನೆ. ನೀವು ಮಾತೆಯರ, ಕುಮಾರಿಯರಿದ್ದೀರಿ. ನೀವು ಹೋಗಿ ಭಾಷಣ ಮಾಡಬೇಕು. ನೀವಂತೂ ಬ್ರಹ್ಮಾಕುಮಾರ- ಕುಮಾರಿಯರಾಗಿದ್ದೀರಿ. ಈಗಂತೂ ಜಗದಂಬನ ಎಷ್ಟು ದೊಡ್ಡ ಮೇಳವು ಸೇರುತ್ತದೆ ಅಂದಮೇಲೆ ಅವರು ಅಷ್ಟು ಸೇವೆ ಮಾಡಿ ಹೋಗಿರಬೇಕಲ್ಲವೆ. ಅಲ್ಲಿ ನೀವು ತಿಳಿಸಬಹುದು- ಬಹಳ ಸೇವೆ ಮಾಡಬಹುದು. ಸೇವಾಧಾರಿ ಮಕ್ಕಳು ತಾವೇ ಮಾಡುತ್ತಿರುತ್ತಾರೆ. ಯಾರು ತಾವಾಗಿಯೇ ಮಾಡುತ್ತಾರೆಯೋ ಅವರು ದೇವತೆಗಳು...ಬೆಳಿಗ್ಗೆ ಹೋಗಿ ರಾತ್ರಿ ಹಿಂತಿರುಗಿ ಬನ್ನಿ. ಸೇವೆ ಮಾಡುವ ಸಾಹಸ ಬೇಕು. ಬಹಳ ಒಳ್ಳೊಳ್ಳೆಯ ಮಕ್ಕಳಿದ್ದಾರೆ ಆದರೆ ಒಂದಲ್ಲ ಒಂದು ಬಂಧನದಲ್ಲಿದ್ದಾರೆ. ರುದ್ರಜ್ಞಾನಯಜ್ಞದಲ್ಲಿ ಅಬಲೆಯರ ಮೇಲೆ ಅನೇಕ ಪ್ರಕಾರದ ವಿಘ್ನಗಳು ಬರುತ್ತವೆ ಅದನ್ನು ಪ್ರತ್ಯಕ್ಷರೂಪದಲ್ಲಿ ನೋಡುತ್ತಿದ್ದೀರಿ ತಂದೆಯಿಂದ ಒಂದು ವೇಳೆ ಆಸ್ತಿಯನ್ನು ಪಡೆಯಬೇಕೆಂದರೆ ಸರ್ವೀಸಿನಲ್ಲಿ ತತ್ಪರವಾಗಿರಬೇಕು, ಶ್ರೀಮತದಂತೆ ನಡೆಯಬೇಕು. ಹಾ! ಲೌಕಿಕ ತಂದೆ- ತಾಯಿ ಮುಂತಾದವರಿದ್ದರೆ ಅವರ ಸೇವೆಯನ್ನೂ ಮಾಡಬೇಕು ಜೊತೆ- ಜೊತೆಯಲ್ಲಿ ಈ ಸೇವೆಯನ್ನೂ ಮಾಡಬೇಕು. ಮುಂಬೈನಲ್ಲಿ ಅಂಭಾ ಮಂದಿರಕ್ಕೆ ಅನೇಕರು ಹೋಗುತ್ತಾರೆ, ಅಲ್ಲಿಯೂ ಸಹ ನೀವು ಹೋಗಿ ಸರ್ವೀಸ್ ಮಾಡಬಹುದು. ಹೀಗೆ ಯಾರು ಸರ್ವೀಸ್ ಮಾಡುತ್ತಾರೆಯೋ ಅವರಿಗೆ ಸರ್ಕಾರವೂ ಸಹ ಶರೀರ ನಿರ್ವಹಣಾರ್ಥವಾಗಿ ಕೊಡುವುದಕ್ಕೋಸ್ಕರ ತಯಾರಿರುತ್ತದೆ. ಒಂದು ವೇಳೆ ಏನನ್ನೂ ತಿಳಿದುಕೊಳ್ಳದವರಾಗಿರಬಹುದು ಆದರೂ ಪರಿಶ್ರಮ ಪಡಿ ಆಗ ಒಬ್ಬರಲ್ಲ ಒಬ್ಬರು ಬಂದೇ ಬರುವರು. ಅನೇಕ ಸರ್ಜನರು ಬೇಕು, ನೀವು ಅಂಧರಿಗೆ ಊರುಗೋಲಾಗಿದ್ದೀರಿ. ನೀವು ಮಕ್ಕಳಿಗೋಸ್ಕರ ಸೇವೆಯಂತೂ ಬಹಳ ಇದೆ. ನಿಮಗೆ ಯಾರಿಂದಲೂ ಹಣವನ್ನು ತೆಗೆದುಕೊಳ್ಳುವ ಇಚ್ಛೆಯಿಲ್ಲ, ನೀವಂತೂ ದಯಾಹೃದಯಿಗಳಾಗಬೇಕು. ದಯಾಹೃದಯಿ ತಂದೆಯ ಮಕ್ಕಳೂ ಸಹ ದಯಾಹೃದಯಿ. ಯಾರು ಅನೇಕರಿಗೆ ಮಾರ್ಗವನ್ನು ತೋರಿಸುತ್ತಾರೆಯೋ ಅವರು ಶ್ರೇಷ್ಠವಾದ ಪದವಿಯನ್ನೇ ಪಡೆಯುತ್ತಾರೆ. ಅನೇಕರು ಕೇಳುವವರಲ್ಲವೆ. ಇಲ್ಲಿಂದ ಹೋದರೆ ಮತ್ತೆ ಮರೆತುಹೋಗುತ್ತದೆ, ನಂಬರ್‌ವಾರ್ ಧಾರಣೆ ಮಾಡುತ್ತಾರೆ, ಆದ್ದರಿಂದ ಇದರಲ್ಲಿ ಬಹಳ ಒಳ್ಳೆಯ ಪರಿಶ್ರಮ ಪಡಬೇಕು. 21 ಜನ್ಮಗಳ ರಾಜ್ಯಭಾಗ್ಯವು ಸಿಗುತ್ತದೆ. ಇದು ಕಡಿಮೆ ಮಾತೇನು! ಕಾಂಗ್ರೆಸ್ಸಿನವರೂ ಸಹ ಹೆಚ್ಚಾಗಿ ನಿದ್ರಿಸುವುದು ವ್ಯರ್ಥವೆಂದು ಹೇಳುತಾರೆ. ತಂದೆಯೂ ಸಹ ಹೇಳುತ್ತಾರೆ - ನಿದ್ರೆಯನ್ನು ಜಯಿಸುವವರಾಗಿ, ರಾತ್ರಿಯಲ್ಲೂ ಸಂಪಾದನೆ ಮಾಡಿಕೊಳ್ಳಿ.

ಯಾರಾದರೂ ಶರೀರ ಬಿಟ್ಟಾಗ ನಾಟಕದಲ್ಲಿ ಅವರ ಪಾತ್ರವೂ ಇಷ್ಟೇ ಇತ್ತೆಂದು ತಿಳಿಯುತ್ತಾರೆ, ಯಾರು ಅನನ್ಯ ಮಕ್ಕಳಿರುತ್ತಾರೆಯೋ ಅವರೇ ಬರುತ್ತಾರೆ. ಕೆಲವರಂತೂ ಬಹಳ ಕಣ್ಣೀರು ಹಾಕುತ್ತಾರೆ, ನಾವು ಸೇವೆ ಮಾಡಲಿಲ್ಲ, ತಂದೆಯ ಮಾತನ್ನು ಪಾಲಿಸಲಿಲ್ಲ ಎಂದು ಪಶ್ಚಾತ್ತಾಪ ಪಡುತ್ತಾರೆ. ಕೆಲವರಂತೂ ಹೀಗೆ ಭಿನ್ನ ಭಿನ್ನ ಪ್ರಕಾರದವರಿರುತ್ತಾರೆ. ತಂದೆಯು ಸಾಕ್ಷಾತ್ಕಾರ ಮಾಡಿಸುತ್ತಾರೆ- ಸರ್ವೀಸ್ ಮಾಡಿ ತಮ್ಮ ಸಮಾನರನ್ನಾಗಿ ಮಾಡಿಕೊಳ್ಳಿ ಎಂದು ನಿಮಗೆ ಎಷ್ಟು ಹೇಳುತ್ತಿದ್ದೆವು ಆದರೆ ಏನನ್ನೂ ಮಾಡಲಿಲ್ಲ ನಂತರ ಅಳುತ್ತೀರಿ. ಧರ್ಮರಾಜನ ಮುಂದೆಯೂ ಸಹ ಅಳುತ್ತಾರೆ, ಏಟನ್ನು ತಿನ್ನುತ್ತಾರೆ. ಪರೀಕ್ಷೆ ಮುಗಿಯಿತು, ಫಲಿತಾಂಶವು ಹೊರಬಂದಿತೆಂದರೆ ನಂತರ ಅಳುವುದರಿಂದ ಪ್ರಯೋಜನವಾಗುತ್ತದೆಯೇನು?

ಈಗ ಪ್ರಿಯತಮನು ಪ್ರಿಯತಮೆಯರನ್ನು ಕರೆದುಕೊಂಡು ಹೋಗಲು ಬಂದಿದ್ದಾರೆ. ತಿಳಿಸುತ್ತಾರೆ- ಬನ್ನಿ , ನಾನು ನಿಮ್ಮನ್ನು ವಿಶ್ವದ

ಮಹಾರಾಣಿಯರನ್ನಾಗಿ ಮಾಡುತ್ತೇನೆ, ಯಾರು ಪುರುಷಾರ್ಥ ಮಾಡುತ್ತೀರೋ ಅವರು ಆಗುತ್ತೀರಿ. ನಕ್ಷತ್ರಗಳಲ್ಲಿಯೂ ನಂಬರ್ ವಾರ್ ಇರುತ್ತವೆ. ಕೆಲವು ನಕ್ಷತ್ರಗಳಂತೂ ಮಿನುಗುತ್ತವೆ, ನೀವು ಪುರುಷಾರ್ಥ ಮಾಡುತ್ತಿದ್ದೀರಿ. ಮೇಲೆ ನಿಮ್ಮ ಹಿಂದಿನ ಫಲಿತಾಂಶದ ಸ್ಮರಣಾರ್ಥವಿದೆ. ಈಗಂತೂ ಗ್ರಹಣ ಹಿಡಿಯುತ್ತದೆಯಲ್ಲವೆ. ನಡೆಯುತ್ತಾ ನಡೆಯುತ್ತಾ ಗ್ರಹಚಾರಿಯು ಕುಳಿತುಬಿಡುತ್ತದೆ ಆದ್ದರಿಂದ ಹೊರಬರಲಾಗುವುದಿಲ್ಲ. ಗ್ರಹಣವು ಹಿಡಿಯಿತೆಂದರೆ ಬೀಳುತ್ತಾರೆ. ಗ್ರಹಣವು ಅನೇಕರಿಗೆ ಹಿಡಿಯುತ್ತದೆ. ಗ್ರಹಚಾರಿಯು ಮಾತಾ- ಪಿತರವರನ್ನೂ ಮರೆಸಿಬಿಡುತ್ತದೆ. ಪರಿಪೂರ್ಣರಂತೂ ಯಾರೂ ಆಗಿಲ್ಲ. ಮಾಯೆಯೂ ಸಹ ಬಲವಂತರಿಗಿಂತ ಬಲಶಾಲಿಯಾಗಿ ಯುದ್ಧ ಮಾಡುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರಿತಿಯ ಮಾತಾ- ಪಿತಾ ಬಾಪ್ ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ರಮತಾ ಯೋಗಿಗಳಾಗಿ ಸೇವೆ ಮಾಡಬೇಕಾಗಿದೆ. ಮನಸಾ- ವಾಚಾ- ಕರ್ಮಣಾ ಯಾವುದೇ ಪ್ರಕಾರದ ಸೇವೆಯಲ್ಲಿ ಅವಶ್ಯಕವಾಗಿ ತತ್ಪರರಾಗಿರಬೇಕಾಗಿದೆ.

2. ರಾತ್ರಿಯಲ್ಲಿ (ಅಮೃತವೇಳೆ) ಜಾಗೃತರಾಗಿಸಂಪಾದನೆ ಮಾಡಿಕೊಳ್ಳಬೇಕಾಗಿದೆ. ನಿದ್ರೆಯನ್ನು ಜಯಿಸುವಂತಹವರಾಗಬೇಕಾಗಿದೆ. ಮುರುಳಿಯನ್ನು ಯಾವುದೇ ಪರಿಸ್ಥಿತಿಯಲ್ಲೂ ಸಹ ಅವಶ್ಯವಾಗಿ ಓದಬೇಕಾಗಿದೆ.

ವರದಾನ: ಅಲ್ಪಕಾಲದ ಸಂಸ್ಕಾರಗಳನ್ನು ಅನಾದಿ ಸಂಸ್ಕಾರಗಳಿಂದ ಪರಿವರ್ತನೆ ಮಾಡುವಂತಹ ಮಹಾಧಾನಿ ಭವ.

ಅಲ್ಪಕಾಲದ ಸಂಸ್ಕಾರ ಯಾವುದನ್ನು ಇಚ್ಛೆ ಪಡದೇ ಹೋದರೂ ಸಹ ಮಾತು ಮತ್ತು ಕರ್ಮ ಮಾಡುತ್ತಾ ಇರುತ್ತಾರೆ. ಆದ್ದರಿಂದ ಹೇಳುವಿರಿ ನನ್ನ ಭಾವ ಇರಲಿಲ್ಲ, ನನ್ನ ಲಕ್ಷ್ಯ ಇರಲಿಲ್ಲ. ಆದರೆ ಆಗಿ ಬಿಟ್ಟಿತು. ಕೆಲವರು ಹೇಳುತ್ತಾರೆ ನಾನು ಕ್ರೋಧ ಮಾಡಲಿಲ್ಲ, ಆದರೆ ನಾನು ಮಾತನಾಡುವ ಸಂಸ್ಕಾರವೇ ಹೀಗಿದೆ...... ಆದ್ದರಿಂದ ಈ ಅಲ್ಪಕಾಲದ ಸಂಸ್ಕಾರವೂ ಸಹ ಅನಿವಾರ್ಯ ಮಾಡಿ ಬಿಡುವುದು. ಈಗ ಈ ಸಂಸ್ಕಾರಗಳನ್ನು ಅನಾದಿ ಸಂಸ್ಕಾರಗಳಾಗಿ ಪರಿವರ್ತನೆ ಮಾಡಿಕೊಳ್ಳಿ. ಆತ್ಮದ ಅನಾದಿ ಮೂಲ ಸಂಸ್ಕಾರವಾಗಿದೆ ಸದಾ ಸಂಪನ್ನ, ಸದಾ ವರದಾನಿ ಮತ್ತು ಮಹಾದಾನಿ.

ಸ್ಲೋಗನ್: ಪರಿಸ್ಥಿತಿ ರೂಪಿ ಬೆಟ್ಟವನ್ನು ಹಾರುವ ಕಲೆಯ ಪುರುಷಾರ್ಥದ ಮೂಲಕ ಪಾರು ಮಾಡುವುದೇ ಹಾರುವ ಯೋಗಿಯಾಗುವುದಾಗಿದೆ.